

ಒಡೆದು ಹೋದ ಮನಸ್ಸನ್ನು ಪ್ರತಿಬಿಂಬಿಸುವ ಆಶ್ವಿಟ್ಜ್

ಅವನ್ನು ಜರ್ಮನ್ನರು ವಾಪಸ್ ಹೋಗುವಾಗ ಸಿಡಿಸಿದ್ದರಿಂದ ಮುರಿದು ರಾಶಿಯಾಗಿ ಬಿದ್ದಿವೆ. ಈಗ ಚಿಮಣಿ ಮಾತ್ರ ಕಾಣಿಸುತ್ತದೆ. ಸಾವಿರಾರು ಜ್ಯೂಗಳನ್ನು ಹಾಗೂ ಇತರರನ್ನು ಸಾಗಿಸಿದ್ದಕ್ಕೆ ಸಾಕ್ಷಿಯಾಗಿರುವ ರೈಲ್ವೆ ಹಳಿಗಳು, ಮನುಷ್ಯರನ್ನು ಕ್ರಿಮಿಗಳಂತೆ ಸಾಗಿಸಿದ ರೈಲ್ವೇ ಕೋಚ್‌ಗಳು, ಬಂದವರಲ್ಲಿ ಗಂಡಸರು, ಹೆಂಗಸರು, ಗ್ಯಾಸ್ ಛೇಂಬರ್‌ಗೆ ಹೋಗುವವರು, ದುಡಿಯಲು ಹೋಗುವವರು, ಸಾವಿನೆಡೆಗೆ, ನಿಧಾನವಾಗಿ ಸಾಯುವವರು ಹೀಗೆ ವಿಂಗಡಿಸಿ, ಕೊಂದು ಹಾಕಿದ, ಸುಟ್ಟು ಬೂದಿ ಮಾಡಿದ ಬರ್ಕನೌ ನೆಲದಲ್ಲಿ ಎದೆ ನಡುಗಿಸುವ ಯಾತನೆಯ ನೋವಿನ ಕಥನಗಳಿವೆ.

ಆಶ್ವಿಟ್ಜ್ ಶಿಬಿರವನ್ನು ಮ್ಯೂಸಿಯಂ ಮಾಡಿದ್ದರೂ ಇಲ್ಲಿ ನಡೆದಾಡುವಾಗ ಅರ್ಥವಾಗದ ರೀತಿಯಲ್ಲಿ ಭಯ, ದುಗುಡ, ನೋವು, ಯಾತನೆಯಾಗುತ್ತದೆ. ಸಂಸಾರ ಒಡೆದು ಚೂರಾಗುವಾಗಿನ, ಕುಟುಂಬವನ್ನು ಬೇರ್ಪಡಿಸುವಾಗಿನ ದುಃಖದ ಕೂಗುಗಳು, ಚಿಕ್ಕ ಜಾಗದಲ್ಲಿ ಹುಳುಗಳಂತೆ ಜನರನ್ನು ಕೂಡಿ ಹಾಕಿದಾಗ ಹೊಮ್ಮುವ ದೇಹದ ವಾಸನೆ, ಶವಗಳನ್ನು ಸುಟ್ಟಾಗ ಹೊಮ್ಮುವ ದುರ್ವಾಸನೆ, ವಿನಾಶಕಾರಿ ಸ್ಥಳದಲ್ಲಿನ ಅವ್ಯಕ್ತ ನೋವು ಮನದಲ್ಲಿ ಆವರಿಸಿ, ದುಃಖ, ನಿಶ್ಶಕ್ತಿ, ಆಘಾತದಿಂದ ಕುಸಿಯುವಂತಾಯಿತು. ಮನುಕುಲದ ಚರಿತ್ರೆಯಲ್ಲಿ ಹೀಗೆಲ್ಲಾ ನಡೆದಿತ್ತೆ ಎಂಬುದನ್ನು ತಿಳಿಯುವಾಗ ನಾಗರಿಕತೆ ಎಂಬ ಪದವೇ ಅರ್ಥಹೀನವೆನಿಸುತ್ತದೆ.

***

**ಆಶ್ವಿಟ್ಜ್‌ನಲ್ಲಿ ಮಹಿಳೆಯರು:** ಆಶ್ವಿಟ್ಜ್ ಶಿಬಿರದಲ್ಲಿ ದಾಖಲಾದ ಹೆಣ್ಣುಮಕ್ಕಳ ಸಂಖ್ಯೆ 1,30,000. ಅವರಲ್ಲಿ ಯಹೂದಿಗಳು (82,000), ಪೋಲಿಷರು (31,000) ಮತ್ತು ರೋಮೇನಿಯನ್ನರು (11,000). ಇವರಲ್ಲದೆ ರಷ್ಯನ್ನರು, ಬೆಲಾರಷ್ಯನ್ನರು, ಉಕ್ರೇನಿಯನ್ನರು,



ವಿದ್ಯುತ್ ತಂತಿಗಳ ಬೇಲಿ

ಜರ್ಮನ್ನರು, ಫ್ರೆಂಚರು ಮತ್ತು ಜೆಕ್ ದೇಶದ ಹೆಣ್ಣುಮಕ್ಕಳೂ ಇದ್ದರು. ಒಟ್ಟಾರೆಯಾಗಿ ಆಶ್ವಿಟ್ಜ್ ಶಿಬಿರದ 4,00,000 ಕೈದಿಗಳಲ್ಲಿ ಶೇಕಡ 30ರಷ್ಟು ಮಹಿಳೆಯರಿದ್ದರು. ಶಿಬಿರಕ್ಕೆ ರೈಲಿನಲ್ಲಿ ಬಂದಿಳಿಯುತ್ತಿದ್ದ ಸಾವಿರಾರು ಮಹಿಳೆಯರಲ್ಲಿ ವಯಸ್ಸಾದವರು, ಅಂಗವಿಕಲರು, ರೋಗಿಗಳು, ಗರ್ಭಿಣಿಯರು, ಸಣ್ಣ ಮಕ್ಕಳಿರುವ ತಾಯಂದಿರನ್ನು ಕೆಲಸ ಮಾಡಲು ಅನರ್ಹರೆಂದು, ತಕ್ಷಣವೇ ಬೇರ್ಪಡಿಸಿ, ಸಾಯಿಸಲು ಗ್ಯಾಸ್ ಛೇಂಬರ್ ಕಡೆಗೆ ಕಳುಹಿಸಿಬಿಡುತ್ತಿದ್ದರು!

**ಶಿಬಿರದಲ್ಲಿ ಜನಿಸಿದ ಮಕ್ಕಳು:** ಮಾರ್ಚ್ 1942ರ ನಂತರ ಸುಮಾರು ಒಂದು ವರ್ಷ ಕಾಲ, ಆಶ್ವಿಟ್ಜ್ ಶಿಬಿರಕ್ಕೆ ಬರುತ್ತಿದ್ದ ಗರ್ಭಿಣಿಯರು ಮಗುವನ್ನು ಹೆರುತ್ತಿದ್ದಂತೆ ಆ ಮಕ್ಕಳನ್ನು ನೀರಲ್ಲಿ ಮುಳುಗಿಸಿಯೋ ಅಥವಾ ವಿಷದ ಚುಚ್ಚುಮದ್ದು ನೀಡಿಯೋ ಸಾಯಿಸುತ್ತಿದ್ದರು. 1943ರ ಜೂನ್ ನಂತರ, ಯಹೂದಿ (ಜ್ಯೂ)ಯಲ್ಲದ ಮಹಿಳೆಗೆ ಜನಿಸಿದ ಮಕ್ಕಳನ್ನು ಕೊಲ್ಲುತ್ತಿರಲಿಲ್ಲ. ಆ ಮಕ್ಕಳ ಹೆಸರನ್ನು ದಾಖಲಿಸಿ, ಶಿಬಿರದ ಸಂಖ್ಯೆ ನೀಡಲಾಗುತ್ತಿತ್ತು. ನವೆಂಬರ್ 1944ರವರೆಗೂ ಜ್ಯೂಗಳಿಗೆ ಹುಟ್ಟಿದ ಮಕ್ಕಳನ್ನು ಕೊಲ್ಲಲಾಗುತ್ತಿತ್ತು. ಒಟ್ಟಾರೆಯಾಗಿ ಆಶ್ವಿಟ್ಜ್ ಶಿಬಿರದಲ್ಲಿ ಜನಿಸಿದ 700 ಮಕ್ಕಳಲ್ಲಿ, 60 ಮಕ್ಕಳಷ್ಟೇ ಸೋವಿಯತ್ ಸೈನ್ಯ ಬಂದು ಬಂಧಮುಕ್ತವಾಗಿಸಿದಾಗ ಉಳಿದಿದ್ದವು.

**ಗ್ಯಾಸ್ ಛೇಂಬರ್:** ನಾಜಿಗಳು ಜೈಕ್ಲೋನ್ ಬಿ ವಿಷಾನಿಲವನ್ನು ಮೊದಲ ಬಾರಿ ಪ್ರಯೋಗ ಮಾಡಿದ್ದು ಸೆಪ್ಟೆಂಬರ್ 1941ರಲ್ಲಿ. ಆಗ ಅವರು 600 ಸೋವಿಯತ್ ಯುದ್ಧಕೈದಿಗಳು ಮತ್ತು 250 ಪೋಲಿಷ್ ಕೈದಿಗಳನ್ನು ಕೊಂದರು.

ಆಶ್ವಿಟ್ಜ್ ಶಿಬಿರಕ್ಕೆ 13 ಲಕ್ಷ ಜನರನ್ನು ಹಿಡಿದು ತರಲಾಗಿತ್ತಾದರೂ ಅವರಲ್ಲಿ ಕೈದಿಗಳಾಗಿ ನೋಂದಾಯಿತರಾಗಿದ್ದವರು 4 ಲಕ್ಷ ಮಂದಿ ಮಾತ್ರ. ಉಳಿದ 9 ಲಕ್ಷ ಮಂದಿಯನ್ನು ರೈಲಿನಿಂದ ಇಳಿಯುತ್ತಿದ್ದಂತೆಯೇ ವಿಷಾನಿಲ ಪ್ರಯೋಗಿಸಿ ಕೊಂದು ಸುಟ್ಟುಹಾಕಲಾಯಿತು!